ಡಿಡಬ್ಲ್ಯೂ-1

**<u>ದಿನಾಂಕಃ 06-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃಶ್ರೀ ಐ.ಕೆ.ಹೆಚ್. ಪಿರ್ಯಾದಿದಾರರ ಪರ ವಕೀಲರಿಂದಃ</u>**

1. ಫಿರ್ಯಾದಿದಾರರು ನನಗೆ ಸುಮಾರು 10 ವರ್ಷಗಳಿಂದ ಪರಿಚಯವಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಹೆಸರಿಗೆ ಜಮೀನು ಇಲ್ಲ, ನನ್ನ ತಂದೆಯ ಹೆಸರಿಗೆ ಜಮೀನು ಇದ್ದು ಅದರ ಸರ್ವೆ ನಂಬರ 12 ಇರುತ್ತದೆ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ನಿಮಗೆ 2 ಎಕರೆ 30 ಗುಂಟೆ ಜಮೀನು ಇದೆ ಎಂದು ಹೇಳಿದ್ದು, ಈಗ ನಿಮ್ಮ ತಂದೆಯ ಹೆಸರಿಗೆ ಜಮೀನು ಇದೆ ಎಂದು ಹೇಳುತ್ತಿದ್ದೀರಿ ಇದರಲ್ಲಿ ಯಾವುದು ಸರಿ ಎಂದರೆ ಸಾಕ್ಷಿಯು ನನ್ನ ತಂದೆಯ ಹೆಸರಿಗೆ ಜಮೀನು ಇರುವುದು ಸರಿ ಎಂದು ನುಡಿಯುತ್ತಾರೆ. ನಾನು ಅಡಿಕೆಯ ಪೀಕ ಉಂಡು ಬಿಡುವ ಕರಾರು ಮಾಡುವ ಏಜೆಂಟ ಕೆಲಸ ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ಅಡಿಕೆ ಪೀಕ ಉಂಡು ಬಿಡುವ ಕರಾರು ಮಾಡುವ ಏಜೆಂಟನಾಗಿದ್ದರಿಂದ ನನಗೆ ಪಿರ್ಯಾದಿದಾರರು 10 ವರ್ಷಗಳಿಂದ ಪರಿಚಿತರು ಎಂದರೆ ಸಾಕ್ಷಿಯು ಅವರು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

2. ಏಪ್ರೀಲ್ 2019 ರ ಕೊನೆ ವಾರದಲ್ಲಿ ನಾನು ಪಿರ್ಯಾದಿದಾರರಿಂದ ರೂ.1,00,000/- ಸಾಲವನ್ನು ಕೇಳಿದ್ದೆ ಎಂದರೆ ಸುಳ್ಳು. ದಿನಾಂಕಃ 28-04-2019 ರಂದು ಪಿರ್ಯಾದಿದಾರರಿಂದ ನಾನು ರೂ. 1,00,000/- ಕೈಗಡ ಸಾಲ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಸಾಲವನ್ನು 05 ತಿಂಗಳೊಳಗಾಗಿ ಮರುಪಾವತಿ ಮಾಡುತ್ತೇನೆ ಎಂದು ವಾಗ್ದಾನ ನೀಡಿದ್ದೆ ಎಂದರೆ ಸರಿಯಲ್ಲ. ಪಿರ್ಯಾದಿದಾರರಿಗೆ ಸೆಪ್ಟೆಂಬರ್-2019 ರಲ್ಲಿ ಹಣದ ಅವಶ್ಯಕತೆ ಇದೆ ಎಂದು ನನಗೆ ನೀಡಿದ ಸಾಲದ ಹಣವನ್ನು ಮರು ಪಾವತಿ ಮಾಡುವಂತೆ ಕೇಳಿದಾಗ ನಾನು ಕೊಡದೇ ಸತಾಯಿಸುತ್ತಾ ಬಂದಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕಃ 17-10-2019 ರಂದು ಸದ್ರಿ ಸಾಲದ ಮರುಪಾವತಿಗಾಗಿ ನನ್ನ ಖಾತೆಯ ಐಡಿಎಫ್‌ಸಿ, ಬ್ಯಾಂಕನ ಚೆಕ್ ಸಂಖ್ಯೆ 000001 ನ್ನು ನೀಡಿರುತ್ತೇನೆ ಎಂದರೆ ಸಾಕ್ಷಿಯು ಅಡಿಕೆ ಪಸಲನ್ನು

ಡಿಡಬ್ಲ್ಯೂ-1

ತೆಗೆದುಕೊಂಡು ಹೋಗುವವರೆಗೆ ಭದ್ರತೆಗಾಗಿ ಪಿರ್ಯಾದಿದಾರರಿಗೆ ಕೊಟ್ಟಂತಹ ಚೆಕ್ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದ್ರಿ ಚೆಕ್ ಸಂಖ್ಯೆಃ 000001 ಭದ್ರತೆಗಾಗಿ ಪಿರ್ಯಾದಿದಾರರಿಗೆ ಕೊಟ್ಟಿರುವ ಬಗ್ಗೆ ಅವರಿಂದ ಯಾವುದೇ ಬಾಂಡ್ ಬರೆಸಿಕೊಂಡಿಲ್ಲ. ಬಾಂಡ ಬರೆಯಿಸಿಕೊಳ್ಳಲು ನಿಮಗೇನು ತೊಂದರೆ ಇತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅವರು ಬರೆದುಕೊಡಲಿಲ್ಲ, ನಾನು ಕೇಳಲಿಲ್ಲ ಎಂದು ನುಡಿಯುತ್ತಾರೆ.

**3.** ನಾನು ಕೊಟ್ಟಂತಹ ಚೆಕ್ ಸಂ. 000001 ನ್ನು ಪಿರ್ಯಾದಿದಾರರು ತಾನು ಖಾತೆ ಹೊಂದಿದ ಫೆಡರಲ್ ಬ್ಯಾಂಕ್‌ಗೆ ದಿನಾಂಕಃ 17-10-2019 ರಂದು ನಗದೀಕರಣಕ್ಕಾಗಿ ಸಲ್ಲಿಸಿರುವ ವಿಚಾರ ನಿಮಗೆ ಗೊತ್ತಿದೆಯಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದ್ರಿ ಚೆಕ್ ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲಾ ಎಂದು ಅಮಾನ್ಯಗೊಂಡು ದಿನಾಂಕಃ 19-10-2019 ರಂದು ಹಿಂಬರಹದೊಂದಿಗೆ ವಾಪಸ್ಸ ಬಂದಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಮಗೆ ಸಂಬಂಧಪಟ್ಟ ಚೆಕ್ ನ್ನು ಬ್ಯಾಂಕಗೆ ಹಾಕಿದರೆ ಆ ಬಗ್ಗೆ ನಿಮ್ಮ ಮೊಬೈಲ್‌ಗೆ ಮೇಸೆಜ ಬರುತ್ತದೆ ಎಂದರೆ ಸಾಕ್ಷಿಯು ನನ್ನ ಬಳಿ ಕೀ ಪ್ಯಾಡ್ ಮೊಬೈಲ್ ಇರುವುದು, ನನಗೆ ಅದೆಲ್ಲ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಚೆಕ್ ಅಮಾನ್ಯಗೊಂಡ ಬಗ್ಗೆ ತಿಳಿಸಲು ನನ್ನನ್ನು ಪಿರ್ಯಾದಿದಾರರು ಹಾವೇರಿಗೆ ಕರೆಸಿಕೊಂಡು ಕೇಳಿದಾಗ ನಾನು ಉಡಾಫೆಯಾಗಿ ಉತ್ತರ ನೀಡಿರುತ್ತೇನೆ ಎಂದರೆ ಸುಳ್ಳು. ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದಿರುವ ವಿಚಾರ ಗೊತ್ತಿದ್ದರು ಸಹ ಪಿರ್ಯಾದಿದಾರರಿಗೆ ಮೋಸ ಮಾಡುವ ಉದ್ದೇಶದಿಂದ ಚೆಕ್‌ನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**4.** ಸದ್ರಿ ಚೆಕ್ ಅಮಾನ್ಯಗೊಂಡ ಬಗ್ಗೆ ಹಣವನ್ನು ಮರುಪಾವತಿ ಮಾಡುವಂತೆ ಪಿರ್ಯಾದಿದಾರರು ನನಗೆ ದಿನಾಂಕಃ 14-11-2019 ರಂದು ತನ್ನ ವಕೀಲರ ಮೂಲಕ ನೋಟಿಸನ್ನು ಕೊಟ್ಟಿದ್ದರು ಎಂದರೆ ಸಾಕ್ಷಿಯು ನನಗೆ ಯಾವುದೇ ನೋಟಿಸ ಬಂದಿಲ್ಲ ಎಂದು ನುಡಿಯುತ್ತಾರೆ. ಸದ್ರಿ ನೋಟಿಸನ್ನು ದಿನಾಂಕಃ 21-11-2019 ರಂದು ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಡಿಡಬ್ಲ್ಯೂ-1

ನಿಪಿ-5 ನ್ನು ಸಾಕ್ಷಿಗೆ ತೋರಿಸಿ ಅದರಲ್ಲಿರುವ ಸಹಿ ತನ್ನದೆ ಆಗಿರುತ್ತದೆ ಎಂದರೆ ಸಾಕ್ಷಿಯು ಅಲ್ಲ. ಎಂದು ನುಡಿದಿರುತ್ತಾರೆ.ಸಾಕ್ಷಿಗೆ ನಿಪಿ-1 ನ್ನು ತೋರಿಸಿ ಸ್ದ್ರಿ ಚೆಕ್ ನ್ನು ನಾನು ಪಿರ್ಯಾದಿದಾರರಿಗೆ ದಿನಾಂಕಃ 17-10-2019 ರಂದು ಕೊಟ್ಟಂತಹ ಚೆಕ್ ಎಂದರೆ ಸರಿ. ಸಹಿ ನನ್ನದೇ ಆಗಿರುತ್ತದೆ ಎಂದರೆ ಸರಿ. ಸ್ದ್ರಿ ಚೆಕ್ ಗೆ ಸಂಬಂಧಿಸಿದಂತೆ ನಾನು ದಿನಾಂಕಃ 02-12-2019 ರಂದು ಶ್ರೀ ಪಿ.ಎಸ್.ಕತ್ಲೇರ ವಕೀಲರ ಮೂಲಕ ನಿಪಿ-6 ರಂತೆ ಪ್ರತ್ಯುತ್ತರ ನೋಟಿಸನ್ನು ಕೊಟ್ಟಿರುತ್ತೇನೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ನಾನು ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ನನ್ನ ವಿರುದ್ಧ ಇನ್ನೊಂದು ಪ್ರಕರಣ ಸಿಸಿ ನಂಬರ 1116/2023 ಇದೆ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿದೆ ಎಂದರೆ ಸರಿ.

**5.** ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದ್ದಿರೂ ನಾನು ಪಿರ್ಯಾದಿದಾರರಿಗೆ ರೂ. 1,00,000/- ಗಳಿಗೆ ಚೆಕ್‌ನ್ನು ಕೊಟ್ಟು ನೆಗೋಷಿಯೆಬಲ್ ಇನಸ್ಟ್ರೂಮೆಂಟ ಕಾಯ್ದೆ ಯಡಿಯಲ್ಲಿ ಅಪರಾಧ ಎಸಗಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಪಿ-6 ರಂತೆ ಪ್ರತ್ಯುತ್ತರ ನೋಟಿಸನ್ನು ಪಿರ್ಯಾದಿದಾರರಿಗೆ ಶ್ರೀ ಪಿ.ಎಸ್. ಕತ್ಲೇರ ವಕೀಲರ ಮೂಲಕ ನೀಡಿದ್ದರು ಸಹ ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಪಿರ್ಯಾದಿದಾರರು ನೀಡಿದ ನೋಟಿಸ ಮತ್ತು ಸಿಸಿ ನಂ. 1116/2023 ರಲ್ಲಿ ನೀಡಿದ ನೋಟಿಸ ಎರಡನ್ನು ಸಹ ನಾನು ಒಂದೇ ದಿನ ಅಂದರೆ ದಿನಾಂಕಃ 21-11-2019 ಸ್ವೀಕರಿಸಿರುತ್ತೇನೆ ಎಂದರೆ ಸರಿಯಲ್ಲ. ಸ್ದ್ರಿ ಎರಡು ಅಂಚೆ ಸ್ವೀಕೃತಿಗಳಲ್ಲಿ ರಾಜೇಂದ್ರ ಎಂದು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ನೋಟಿಸ ತಲುಪಿದ ನಂತರ 15 ದಿನಗಳ ಒಳಗೆ ನಾನು ರೂ. 1,00,000/- ಗಳನ್ನು ಪಿರ್ಯಾದಿದಾರರಿಗೆ ವಾಪಸ್ಸ ಕೊಡಲಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಹಣ ಹೇಗೆ ವಾಪಸ್ಸ ಕೊಡಲಿ ಎಂದು ನುಡಿಯುತ್ತಾರೆ. ನಾನು ಹಣ ಕೊಡದೆ ಇರುವ ಕಾರಣ ಪಿರ್ಯಾದಿದಾರರು ಈ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಪ್ರಕರಣ ದಾಖಲಾದ ಬಗ್ಗೆ ಗೊತ್ತಿಲ್ಲ

ನ್ಯಾಯಾಲಯದಿಂದ ನೋಟಿಸ ಬಂದ ಮೇಲೆ ಗೊತ್ತಾಯಿತು ಎಂದು ನುಡಿಯುತ್ತಾರೆ. ಚೆಕ್ ನಂ. 000001 ರಲ್ಲಿ ನಮೂದಿಸಿದ ರೂ. 100000/- ಹಣಕ್ಕೆ ದುಪ್ಪಟ್ಟು ಹಣವನ್ನು ಪಿರ್ಯಾದಿದಾರರಿಗೆ ನಾನು ಕೊಡಲು ಬಾಧ್ಯಸ್ಥರಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಪಿರ್ಯಾದಿದಾರರ ಅಡಿಕೆ ಮತ್ತು ಜಮೀನಿಗೆ ಸಂಬಂಧಿಸಿದಂತೆ ಯಾವುದೇ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಯಾವುದೇ ಜಮೀನು ಇಲ್ಲ ಎಂದರೆ ಸಾಕ್ಷಿಯು ನನ್ನ ತಂದೆಯ ಹೆಸರಿನಲ್ಲಿದ್ದು ಒಟ್ಟು ಕುಟುಂಬದ ಜಮೀನು ಇದೆ ಎಂದು ನುಡಿಯುತ್ತಾರೆ. ಪಿರ್ಯಾದಿದಾರರಿಗೆ ಕೊಡಬೇಕಾದ ಹಣವನ್ನು ಎತ್ತಿ ಹಾಕಬೇಕೆಂಬ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಜೇಂದ್ರಗೌಡ ಮತ್ತು ರಾಜೇಂದ್ರ ಎಂಬ ಎರಡೂ ಸಹಿಗಳು ನನ್ನವೇ ಆಗಿರುತ್ತವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)**

ಓ ಹೇ ಕೇ ಸರಿ ಇದೆ.

-ಸಹಿ-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.